

ನಿಟ್ಟಿನಲ್ಲಿ ಸಾಕಷ್ಟು ಕೆಲಸಗಳು ನಡೆಯುತ್ತಿವೆ; ಅನೇಕ ಯೋಜನೆಗಳು ಜಾರಿಯಾಗುತ್ತಿವೆ.

ಬಾಲ್ಯದಿಂದಲೂ ನನಗೆ ಹಳ್ಳಿಯೆಂದರೆ ತುಂಬಾ ಇಷ್ಟ. ನನ್ನ ಬಿಡುವಿನ ಸಮಯದಲ್ಲಿ ನಾನು ಸೈಕಲ್ ಏರಿ ಸಮೀಪದ ಯಾವುದಾದರೂ ಹಳ್ಳಿಗೆ ಹೋಗಿ ಅಲ್ಲಿನ ಸುಂದರ ಪರಿಸರವನ್ನು, ಅದರ ಆಹ್ಲಾದಕರ ವಾತಾವರಣವನ್ನು ಆಸ್ವಾದಿಸುತ್ತಿದ್ದೆ. ಒಮ್ಮೊಮ್ಮೆ ಜೊತೆಯಲ್ಲಿ ನನ್ನ ಮಕ್ಕಳನ್ನೂ ಕರೆದುಕೊಂಡು ಹೋಗುತ್ತಿದ್ದೆ. ಅಲ್ಲಿನ ಮರ-ಗಿಡಗಳನ್ನು, ವಿವಿಧ ತಾಣಗಳನ್ನು ಅವರಿಗೆ ಪರಿಚಯಿಸುತ್ತಿದ್ದೆ. 'ನಾನು ತಂದುಕೊಡುವ ಪುಸ್ತಕಗಳನ್ನು ಮಾತ್ರ ಓದಿದರೆ ಸಾಲದು; ಹಳ್ಳಿಗಳಿಗೆ, ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಇವುಗಳ ಮಹತ್ವವನ್ನು ಅರಿತುಕೊಳ್ಳಬೇಕು' ಎಂದು ಅವರಿಗೆ ಹೇಳುತ್ತಲೇ ಇರುತ್ತಿದ್ದೆ. ಶಾಂತ ಪರಿಸರವು ಮಾನವನ ಸ್ವಭಾವವನ್ನು ಮೃದುವಾಗಿಸುತ್ತದೆ. ತನ್ಮೂಲಕ ವಿಶ್ವಶಾಂತಿಗೆ ನೆರವಾಗುತ್ತದೆ. ನನ್ನ ಮಕ್ಕಳಿಗೂ ಇದನ್ನೇ ಹೇಳಿದ್ದೇನೆ; ಪರಿಚಿತರಿಗೂ ಇದೇ ಸಂದೇಶ ರವಾನಿಸಿದ್ದೇನೆ. ಬಹುಶಃ ಇಂತಹ ಸೊಬಗಿನ ವಾತಾವರಣವೇ ನನ್ನೊಳಗಿನ ಕವಿಯ 'ಜೀವ'ವಾಗಿರಬಹುದು.

◆ **ನೀವು ಮತ್ತು ನಿಮ್ಮ ಮಕ್ಕಳಿಗೆ ಸಂಬಂಧಿಸಿದ ಯಾವುದಾದರೂ ಮರೆಯಲಾಗದ ಘಟನೆಯನ್ನು ವಿವರಿಸಬಹುದಾ?**

ಒಂದಲ್ಲ, ಎರಡಲ್ಲ, ನೂರಾರು ಘಟನೆಗಳು ನನ್ನ ನೆನಪಿನಲ್ಲಿವೆ. ನಾನು ನನ್ನ ಮನೆಯನ್ನು ತುಂಬಾ ಇಷ್ಟಪಡುವ ವ್ಯಕ್ತಿ. ಮನೆಯೊಳಗೇ ಇರುವುದು, ಮನೆಯ ಎಲ್ಲಾ ಸದಸ್ಯರೊಂದಿಗೆ ಹರಟೆ ಹೊಡೆಯುವುದು ನನಗೆ ತುಂಬಾ ಇಷ್ಟ. ನನ್ನ ಪತ್ನಿ, ಮಕ್ಕಳು ಹಾಗೂ ಇತರ ಸದಸ್ಯರು ನನಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಆದರೆ ಸಾಹಿತ್ಯ ರಚನೆಯ ಸಂದರ್ಭದಲ್ಲಿ, ಕವನದ ಕಲ್ಪನೆಗಳು ಮನಸ್ಸಿನಲ್ಲಿ ಮೂಡಿದಾಗ ನಾನು ಅನೇಕ ಬಾರಿ ನನ್ನನ್ನೇ ಮರೆತುಬಿಡುತ್ತೇನೆ. ನನ್ನ ಈ ತನ್ಮಯತೆಯೋ ಅಥವಾ ಮರೆಗುಳಿತನವೋ ಹಲವು ಬಾರಿ ನಗೆಪಾಟಲಿಗೆ ಕಾರಣವಾಗಿದೆ! ಒಮ್ಮೆ ನಾನು ನನ್ನ ಸೈಕಲ್‌ನಲ್ಲಿ ಮಗನನ್ನು ಕುಳ್ಳಿರಿಸಿಕೊಂಡು ಮನೆಯಿಂದ ಸ್ವಲ್ಪ ದೂರದಲ್ಲಿದ್ದ ದಿನಸಿ ಅಂಗಡಿಗೆ ಹೋಗಿದ್ದೆ.